ಜಂಟಿ ನಿರ್ದೇಶಕರು (ನಗರ ಯೋಜನೆ-ಉತ್ತರ)
11/06/23-24
ದಿನಾಂಕ 21/03/24
ಬೆಂಗಳೂರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಜಂಟಿ ನಿರ್ದೇಶಕರು (ಕಟ್ಟಡ ಪರವಾನಗಿ ಕೋಶ– ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002**

ಸಂಖ್ಯೆ: BBMP/Addl.Dir/JDNORTH/LP/0087/2019-20 ದಿನಾಂಕ: 21/03/24

## ಪ್ರಾರಂಭಿಕ ಪ್ರಮಾಣಪತ್ರ (ಭಾಗಶಃ)

ವಿಷಯ: ಆಸ್ತಿ ಖಾತಾ ಸಂಖ್ಯೆ:3380, ಸರ್ವೆ ನಂ.41/2, 42/1, 42/2, 43/3, 43/4, 43/5, 43/6, 43/7ಎ, 43/7ಬಿ, 43/8, 43/9, ಮುನಿಸಪಲ್ ನಂ.203, ಪಣತ್ತೂರು ಗ್ರಾಮ, ವರ್ತೂರು ಹೋಬಳಿ, ವಾರ್ಡ್ ನಂ.149, ಮಹದೇವಪುರ ವಲಯ, ಬೆಂಗಳೂರು ರ ಸ್ವತ್ತಿನಲ್ಲಿ ಬ್ಲಾಕ್–1, ವಿಂಗ್–ಎ ಮತ್ತು ಬಿ, ಬ್ಲಾಕ್–2, ವಿಂಗ್–ಎ ಮತ್ತು ಬಿ ಮತ್ತು ಬ್ಲಾಕ್–3, ವಿಂಗ್–ಎ, ಬಿ ಮತ್ತು ಸಿ ರಲ್ಲಿ ಸಾಮಾನ್ಯ ತಳ ಮಹಡಿಯನ್ನೊಳಗೊಂಡಂತೆ ನೆಲ + ಮೇಲಿನ 14 ಅಂತಸ್ತುಗಳಲ್ಲಿ ಒಟ್ಟಾರೆ 644 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:** 1) ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/JDNORTH/LP/0087/2019-20 ರಂತೆ ದಿನಾಂಕ: 17–11–2022.

2) ತಮ್ಮ ಮನವಿ ಪತ್ರ ದಿನಾಂಕ: 05–02–2024.

* * * * * * *

ಆಸ್ತಿ ಖಾತಾ ಸಂಖ್ಯೆ:3380, ಸರ್ವೆ ನಂ.41/2, 42/1, 42/2, 43/3, 43/4, 43/5, 43/6, 43/7ಎ, 43/7ಬಿ, 43/8, 43/9, ಮುನಿಸಪಲ್ ನಂ.203, ಪಣತ್ತೂರು ಗ್ರಾಮ, ವರ್ತೂರು ಹೋಬಳಿ, ವಾರ್ಡ್ ನಂ.149, ಮಹದೇವಪುರ ವಲಯ, ಬೆಂಗಳೂರು ರ ಸ್ವತ್ತಿನಲ್ಲಿ ಬ್ಲಾಕ್–1, 2 ಮತ್ತು 3 ರಲ್ಲಿ ಸಾಮಾನ್ಯ ತಳ ಮಹಡಿಯನ್ನೊಳಗೊಂಡಂತೆ ಬ್ಲಾಕ್–1ರ ವಿಂಗ್–ಎ ಮತ್ತು ಬಿ ರಲ್ಲಿ ನೆಲ + ಮೇಲಿನ 14 ಅಂತಸ್ತುಗಳು, ಬ್ಲಾಕ್–2ರ ವಿಂಗ್–ಎ ಮತ್ತು ಬಿ ರಲ್ಲಿ ನೆಲ + ಮೇಲಿನ 14 ಅಂತಸ್ತುಗಳು, ಬ್ಲಾಕ್–3ರ ವಿಂಗ್–ಎ, ಬಿ ಮತ್ತು ಸಿ ರಲ್ಲಿ ನೆಲ + ಮೇಲಿನ 14 ಅಂತಸ್ತುಗಳು, ಬ್ಲಾಕ್–4ರ ವಿಂಗ್–ಎ, ಬಿ ಮತ್ತು ಸಿ ರಲ್ಲಿ ತಳ + ನೆಲ + ಮೇಲಿನ 14 ಅಂತಸ್ತುಗಳು, ಬ್ಲಾಕ್–5ರ ವಿಂಗ್–ಎ, ಬಿ, ಸಿ ಮತ್ತು ಡಿ ರಲ್ಲಿ ತಳ + ನೆಲ + ಮೇಲಿನ 14 ಅಂತಸ್ತುಗಳು ಮತ್ತು ಬ್ಲಾಕ್–6, 7 ಮತ್ತು 8 ರಲ್ಲಿ ಸಾಮಾನ್ಯ ತಳ ಮಹಡಿಯನ್ನೊಳಗೊಂಡಂತೆ ಬ್ಲಾಕ್–6ರ ವಿಂಗ್– ಎ, ಬಿ ಮತ್ತು ಸಿ ರಲ್ಲಿ ನೆಲ + ಮೇಲಿನ 14 ಅಂತಸ್ತುಗಳು, ಬ್ಲಾಕ್–7ರ ವಿಂಗ್- ಎ, ಬಿ, ಸಿ ಮತ್ತು ಡಿ ರಲ್ಲಿ ನೆಲ + ಮೇಲಿನ 14 ಅಂತಸ್ತುಗಳು, ಬ್ಲಾಕ್–8ರ ವಿಂಗ್-ಎ ರಲ್ಲಿ ನೆಲ + ಮೇಲಿನ 8 ಅಂತಸ್ತುಗಳು ಮತ್ತು ಬ್ಲಾಕ್–8 ವಿಂಗ್–ಬಿ ರಲ್ಲಿ ನೆಲ + ಮೇಲಿನ 7 ಅಂತಸ್ತುಗಳಲ್ಲಿ 1806 ಘಟಕಗಳು ಹಾಗೂ 395 EWS ಘಟಕಗಳನ್ನೊಳಗೊಂಡಂತೆ ಒಟ್ಟಾರೆ 2201 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡ ನಿರ್ಮಿಸಲು ಈ ಕಛೇರಿಯಿಂದ ಸಂಖ್ಯೆ:BBMP/Adll.Dir/JD NORTH/LP/0087/2019-20 ರಂತೆ ದಿನಾಂಕ: 17–11–2022 ರಂದು ಕಟ್ಟಡ ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ಪ್ರಸ್ತುತ ಬ್ಲಾಕ್–1, ವಿಂಗ್–ಎ ಮತ್ತು ಬಿ, ಬ್ಲಾಕ್–2, ವಿಂಗ್–ಎ ಮತ್ತು ಬಿ ಮತ್ತು ಬ್ಲಾಕ್–3, ವಿಂಗ್–ಎ, ಬಿ ಮತ್ತು ಸಿ ರಲ್ಲಿ ಸಾಮಾನ್ಯ ತಳ ಮಹಡಿಯನ್ನೊಳಗೊಂಡಂತೆ ನೆಲ + ಮೇಲಿನ 14 ಅಂತಸ್ತುಗಳ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಉಲ್ಲೇಖ (2) ರಲ್ಲಿ ಕೋರಿರುವುದಕ್ಕೆ ಸಂಬಂಧಿಸಿದಂತೆ, ಕಟ್ಟಡ ನಿರ್ಮಾಣದ ಸ್ಥಳವನ್ನು ಪರಿಶೀಲಿಸಲಾಗಿ, ಮಂಜೂರಾತಿ ನಕ್ಷೆಯಂತೆ ಅಗತ್ಯ ನಡು ಜಾಗಗಳನ್ನು ಬಿಟ್ಟು ಕಟ್ಟಡದ ಕಾಮಗಾರಿ ಪ್ರಗತಿಯಲ್ಲಿರುವುದನ್ನು ಗಮನಿಸಲಾಗಿದೆ.

ಅಪರ ನಿರ್ದೇಶಕರು (ನಗರ ಯೋಜನೆ) ರವರು ಪ್ರಾರಂಭಿಕ ಪ್ರಮಾಣಪತ್ರ ನೀಡುವ ಪ್ರಸ್ತಾವನೆಗೆ ದಿನಾಂಕ: 14-03-2024 ರಂದು ಅನುಮೋದನೆ ನೀಡಿರುತ್ತಾರೆ. ಅರ್ಜಿದಾರರು ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಸಂಬಂಧ ಒಟ್ಟು ರೂ. 2,18,500/- ಗಳಿಗೆ ಡಿ.ಡಿಯನ್ನು ಸಲ್ಲಿಸಿ ಈ ಕಛೇರಿಯ ರಶೀದಿ ಸಂಖ್ಯೆ: RE-ifms 331-TP/000133, ದಿನಾಂಕ: 16-03-2024 ರಂದು ಸಂದಾಯ ಮಾಡಿರುವುದರಿಂದ ಬ್ಲಾಕ್-1, ವಿಂಗ್-ಎ ಮತ್ತು ಬಿ, ಬ್ಲಾಕ್-2, ವಿಂಗ್-ಎ ಮತ್ತು ಬಿ ಮತ್ತು ಬ್ಲಾಕ್-3, ವಿಂಗ್-ಎ, ಬಿ ಮತ್ತು ಸಿ ರಲ್ಲಿ ಸಾಮಾನ್ಯ ತಳ ಮಹಡಿಯನ್ನೊಳಗೊಂಡಂತೆ ನೆಲ + ಮೇಲಿನ 14 ಅಂತಸ್ತುಗಳ ವಸತಿ ಸಮುಚ್ಚಯ ಕಟ್ಟಡಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗಿದೆ.

**ಷರತ್ತುಗಳು**

1. ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2. ಮುಂದಿನ (Immediate next) ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ವಿತರಿಸುವ ಮುನ್ನ ಕರ್ನಾಟಕ ಅಗ್ನಿಶಾಮಕ ಇಲಾಖೆಯಿಂದ ಪರಿಷ್ಕೃತ ನಿರಾಕ್ಷೇಪಣಾ ಪತ್ರವನ್ನು ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಮಾರ್ಪಾಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಪಡೆದು ಸಲ್ಲಿಸುವುದು.
3. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಯಾವುದೇ ಅಪಘಾತ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
4. ಮಂಜೂರಾತಿ ನಕ್ಷೆಯ ಕಟ್ಟಡ ನಿರ್ಮಾಣ ಪೂರ್ಣಗೊಂಡ ನಂತರ ಪಾಲಿಕೆಯಿಂದ ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯತಕ್ಕದ್ದು.
5. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಇಂಜಿನಿಯರಿಂಗ್ ಉಪ-ವಿಭಾಗಕ್ಕೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
6. ನಿವೇಶನದ ಖಾತಾ ವಿಭಜನೆ, ದಾಖಲಾತಿಗಳನ್ನು / ಸ್ವತ್ತಿನ ಹಕ್ಕನ್ನು ಬದಲಾಯಿಸಿದಲ್ಲಿ ಮತ್ತು ಯಾವುದೇ ರೀತಿ ದಾಖಲಾತಿಗಳನ್ನು ಅಥವಾ ವಾಸ್ತವಾಂಶ ಮರೆಮಾಚಿದಲ್ಲಿ ಅರ್ಜಿದಾರರು ನೇರ ಹೊಣೆಯಾಗಿರುತ್ತಾರೆ ಮತ್ತು ನೀಡಲಾದ ಕಟ್ಟಡ ನಕ್ಷೆ ಮಂಜೂರಾತಿಯು ತನ್ನಿಂದತಾನೇ ರದ್ದುಗೊಳ್ಳುತ್ತದೆ.
7. ವಿವಿಧ ಇಲಾಖೆಗಳಿಂದ ಪಡೆದಿರುವ ನಿರಾಕ್ಷೇಪಣಾ ಪತ್ರಗಳಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು
8. ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ಕಟ್ಟಡ ನಿರ್ಮಾಣ ಮತ್ತು ಕಟ್ಟಡ ತೆರವಿನ ತ್ಯಾಜ್ಯದ ನಿರ್ವಹಣೆ ಮತ್ತು ವಿಲೇವಾರಿಯನ್ನು ಮಾಡಲು ಘನತ್ಯಾಜ್ಯ ನಿರ್ವಹಣೆ (ಎಸ್.ಡಬ್ಲ್ಯೂ.ಎಂ) ಉಪನಿಯಮ 2016 ಕ್ಕೆ ಬದ್ಧವಾಗಿರತಕ್ಕದ್ದು.
9. ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಪಾಯಿಂಟ್‌ಗಳನ್ನು ಅಳವಡಿಸಲು ಅಗತ್ಯ ಕ್ರಮವಹಿಸುವುದು.
10. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸಂಸ್ಕರಿಸಿದ (Treated Water Utilisation for Construction) ನೀರನ್ನು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕಡ್ಡಾಯವಾಗಿ ಬಳಸಿಕೊಳ್ಳುವುದು.

11. ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ಪ್ರತಿ 240.00 ಚ.ಮೀ ಅನುಪಾತ ವಿಸ್ತೀರ್ಣಕ್ಕೆ ಒಂದರಂತೆ ಗಿಡವನ್ನು ನೆಡುವುದು.

**-sd-**
ಜಂಟಿ ನಿರ್ದೇಶಕರು (ನಗರ ಯೋಜನೆ–ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ,

M/s Shivakar Infra Pvt Ltd.
M/s Akarsha Reality Pvt Ltd.
# 2/4, Langford Garden Street,
Richmond Town, Bengaluru-560025.

ಪ್ರತಿಯನ್ನು:

1 ಕಾರ್ಯಪಾಲಕ ಅಭಿಯಂತರರು (ಮಹದೇವಪುರ ವಿಭಾಗ)/ ಸಹಾಯಕ ಕಾರ್ಯಪಾಲಕ ಅಭಿಯಂತರರು (ವೈಟ್‌ಫೀಲ್ಡ್ ಉಪ ವಿಭಾಗ)ರವರಿಗೆ ಮಾಹಿತಿಗಾಗಿ.

2 ಕಛೇರಿ ಪ್ರತಿ.

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

20/3/24

20/3/24